

# ಮರುಭೂಮಿಯಲ್ಲಿ ಮರ!

ಮರುಭೂಮಿಯ ಮಧ್ಯಭಾಗದಲ್ಲಿ ಹನಿ ನೀರೂ ಇರದ ಜಾಗದಲ್ಲಿ ಹಚ್ಚ ಹಸಿರಿನಿಂದ ಕಂಗೊಳಿಸುವ ಮರ! ಇದು ಬಹರೈನ್ ದೇಶದಲ್ಲಿ ಕಂಡುಬಂದಿರುವ ಅಚ್ಚರಿ.

'ಟ್ರೀ ಆಫ್ ಲೈಫ್' ಎಂದೇ ಕರೆಯುವ, 400 ವರ್ಷಗಳಷ್ಟು ಹಳೆಯದಾದ ಈ ಮರವು ಪ್ರಕೃತಿಯ ಅತ್ಯದ್ಭುತ ಸಂಗತಿಯೇ ಸರಿ. ಜಮೇಲ್ ದುಖಾನ್ ಎಂಬ ಊರಿನಿಂದ 2 ಕಿ.ಮೀ ದೂರದಲ್ಲಿರುವ 25 ಮೀಟರ್ ಎತ್ತರದ ಮರಳದಿಬ್ಬದ ಮೇಲೆ ಈ ಮರವಿದೆ. ಈ ಮರದ ಬಗ್ಗೆಯೇ ಅನೇಕ ದಂತಕಥೆಗಳು ಪ್ರಚಲಿತವಾಗಿವೆ. ಕೆಲವರು ಇದನ್ನು ಈಡನ್ ತೋಟವೆಂದೂ, ಮತ್ತೆ ಕೆಲವು ಬುಡಕಟ್ಟು ಜನರು 'ನೀರಿನ ಅಧಿದೇವತೆ' ಯಂಕಿಯ ವರಪ್ರಸಾದವೆಂದೂ ಭಾವಿಸಿದ್ದಾರೆ.

ಅರಬ್ಬರಿಂದ 'ಶರಜಾತ್-ಆಲ್-ಹಯಾತ್' ಎಂದು ಕರೆಸಿಕೊಳ್ಳುವ ಈ ಮರವು ಕಳೆದ 4 ಶತಮಾನಗಳಿಂದಲೂ ಬೆಳೆಯುತ್ತಲೇ ಇದೆ! ಪ್ರಕೃತಿಯ ಈ ಅಚ್ಚರಿಯನ್ನು ನೋಡಲೆಂದೇ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಇಲ್ಲಿಗೆ ಬರುವವರು ಎರಡೆರಡು ಬಾರಿ ತಮ್ಮ ವಾಹನಗಳ ಗೇರನ್ನು ಪರೀಕ್ಷಿಸಿಕೊಳ್ಳಬೇಕು- ಇಲ್ಲವಾದಲ್ಲಿ ವಾಹನವು ಅಗಾಧ ಮರಳ ರಾಶಿಯ ಮಧ್ಯದಲ್ಲಿ ಹೂತು ಹೋಗುವ ಅಪಾಯವಿದೆ.



■ ವಿದ್ಯಾ ಹಾಲಭಾವಿ